ಸಾಕಷ್ಟು ಅವಕಾಶಗಳು ಸಿಗುತ್ತಿದ್ದವು. ಈಗಿನ ಪರಿಸ್ಥಿತಿ ಹಾಗಿಲ್ಲ. ದಿನಗೂಲಿ ಕಾರ್ಮಿಕರ ಹಾಗೆಯೇ ನಾವೂ ಕೆಲಸ ಹುಡುಕಿಕೊಂಡು ಹೋಗಬೇಕು. ಅವಕಾಶವನ್ನು ಗಿಟ್ಟಿಸಿಕೊಳ್ಳಬೇಕು. ಪೈಪೋಟಿಯಲ್ಲಿ ಮುಂಚೂಣಿಯಲ್ಲಿದ್ದರೆ ಮಾತ್ರ ಇಲ್ಲಿ ಉಳಿದುಕೊಳ್ಳಲು ಸಾಧ್ಯ' ಎನ್ನುವ ಅವರು ಚಿತ್ರರಂಗದಲ್ಲಿ ಇತ್ತೀಚೆಗೆ ಕಂಡುಬರುತ್ತಿರುವ ಬದಲಾವಣೆಯ ಕುರಿತೂ ಗಮನ ಸೆಳೆಯುತ್ತಾರೆ.

'ಈಗ ಹದಿನೈದಿಪ್ಪತ್ತು ವರ್ಷಗಳ ಹಿಂದೆ ಸಾಕಷ್ಟು ಗಟ್ಟಿಯಾದ ಮಹಿಳಾ ಪಾತ್ರಗಳು ಸೃಷ್ಟಿಯಾಗುತ್ತಿದ್ದವು. ಆರತಿ, ಮಂಜುಳಾ, ಲಕ್ಷ್ಮಿ ಇವರೆಲ್ಲ ಮಾಡಿರುವ ಪಾತ್ರಗಳನ್ನೇ ನೋಡಿ. ಹಾಗಾಗಿಯೇ ಅವರನ್ನು ನಾವೆಲ್ಲ ಇಂದಿಗೂ ನೆನಪಿಸಿಕೊಳ್ಳುತ್ತೇವೆ. ಆದರೆ ನಂತರ ಪರಿಸ್ಥಿತಿ ಬದಲಾಯ್ತು. ಎರಡು ಹಾಡು ನಾಲ್ಕು ದೃಶ್ಯಗಳಿಗೆ ಮಾತ್ರ ನಾಯಕಿ ಸೀಮಿತ ಎನ್ನುವ ಹಾಗಾಯ್ತು. ಆದರೆ ಈಗ ಮತ್ತೆ ಪರಿಸ್ಥಿತಿ ಬದಲಾಗುತ್ತಿದೆ. ಚಿತ್ರರಂಗಕ್ಕೆ ಸಾಕಷ್ಟು ಹೊಸಬರು ಬರುತ್ತಿದ್ದಾರೆ. ಹೀರೊ ಹೀರೊಯಿನ್ ಎಂಬ ಪರಿಕಲ್ಪನೆಯೇ ನಿಧಾನಕ್ಕೆ ಕರಗಿ 'ಕಲಾವಿದ' ಎಂಬುದಷ್ಟೇ ಉಳಿದುಕೊಳ್ಳುತ್ತಿದೆ. ಹೊಸ ಹೊಸ ರೀತಿಯ ಪ್ರಯೋಗಗಳು ಗೆಲ್ಲುತ್ತಿವೆ. ಕಥೆಯನ್ನು ನೆಚ್ಚಿ ಸಿನಿಮಾ ಮಾಡುವವರು ಜನರಿಗೆ ಮೆಚ್ಚುಗೆ ಆಗುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ' ಎನ್ನುತ್ತಾರೆ ಅವರು.

ನಟನೆಯ ಜೊತೆಗೆ ನಿರ್ದೇಶನದ ಟೋಪಿಯನ್ನೂ ಧರಿಸಿರುವುದು ಅಕ್ಷತಾ ವೈಶಿಷ್ಟ್ಯ. ತೆಲುಗಿನಲ್ಲಿ ಒಂದು ಸಿನಿಮಾ ನಿರ್ದೇಶಿಸಿದ ಅನುಭವ ಇವರಿಗಿದೆ. 'ನಾನು ಮೊದಲಿನಿಂದಲೂ ನಟಿಯಾಗಬೇಕು ಎಂದು ಕನಸು ಕಂಡವಳು. ನಿರ್ದೇಶಕಿ ಆಗುವ ಹಂಬಲ ಇದ್ದವಳಲ್ಲ. ಆದರೆ ಅನಿವಾರ್ಯ ಪರಿಸ್ಥಿತಿಯಲ್ಲಿ ಒಂದು ಸಿನಿಮಾ ನಿರ್ದೇಶನ ಮಾಡಿದೆ. ಹಾಗಂತ ಅದರಲ್ಲಿ ಆಸಕ್ತಿ ಇಲ್ಲ ಎಂದಲ್ಲ. ಸದ್ಯಕ್ಕೆ ನಟಿಯಾಗಿ ಮುಂದುವರಿಯುತ್ತೇನೆ. ಕೆಲವು ವರ್ಷಗಳ ನಂತರ ನಿರ್ದೇಶನದಲ್ಲಿಯೂ ತೊಡಗಿಕೊಳ್ಳುತ್ತೇನೆ. ಬರೀ ಒಂದೇ ದಾರಿ ಇಟ್ಟುಕೊಂಡರೆ ಕಷ್ಟ, ಒಂದು ಪರ್ಯಾಯ ಆಯ್ಕೆಯೂ ಇಟ್ಟುಕೊಂಡಿರಬೇಕಲ್ಲವೇ?' ಎಂದು ನಗುತ್ತಾರೆ.

'ಬಾಹುಬಲಿ'ಯಲ್ಲಿ ಅನುಷ್ಕಾ ಶೆಟ್ಟಿ ಮಾಡಿದ ಪಾತ್ರ, 'ಮಣಿಕರ್ಣಿಕಾ' ಸಿನಿಮಾದಲ್ಲಿ ಕಂಗನಾ ನಟಿಸಿದ ರೀತಿಯ ಪೌರಾಣಿಕ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕು ಎಂಬ ಹೆಬ್ಬಯಕೆ ಅಕ್ಷತಾ ಅವರಿಗೆ ಇದೆ. ಆ ದಿನಗಳೂ ಹತ್ತಿರದಲ್ಲಿಯೇ ಇವೆ ಎಂಬ ನಿರೀಕ್ಷೆಯ ಕಣ್ಣುಗಳಿಂದ ಅವರು ಕೊರೋನಾ ಲಾಕ್‌ಡೌನ್ ದಿನಗಳನ್ನು ಕಳೆಯುತ್ತಿದ್ದಾರೆ.

# ಲಾಕ್ಡ್ ಆದ ಸಂಯುಕ್ತಾ



**ಕೊ**ರೊನಾ ಭೀತಿಯಲ್ಲಿ ಇಡೀ ದೇಶವೇ ಲಾಕ್‌ಡೌನ್ ಪರಿಸ್ಥಿತಿಯಲ್ಲಿದೆ. ಸಂಯುಕ್ತಾ ಹೊರನಾಡು ಲಾಕ್ಡ್ ಆಗಿದ್ದರಲ್ಲಿ ವಿಶೇಷ ಏನು ಎಂದು ಯೋಚಿಸುತ್ತಿದ್ದೀರಾ? ಖಂಡಿತ ವೈಶಿಷ್ಟ್ಯ ಇದೆ. ಇದು ಕೊರೊನಾ ಕಾರಣದಿಂದ ಆದ ಲಾಕ್‌ಡೌನ್ ಅಲ್ಲ. ವೆಬ್‌ಸೀರೀಸ್‌ಗಾಗಿ ಮಾಡಿಕೊಂಡ ಲಾಕ್‌ಡೌನ್.

ಹೌದು, ಸಂಯುಕ್ತಾ ಹೊರನಾಡು, ತೆಲುಗಿನ 'ಲಾಕ್ಡ್' ಎನ್ನುವ ವೆಬ್‌ಸೀರೀಸ್‌ನಲ್ಲಿ ನಟಿಸುತ್ತಿದ್ದಾರೆ. ಈ ವೆಬ್‌ಸೀರೀಸ್ ಅನ್ನು ಖ್ಯಾತ ನಟ ಅಲ್ಲು ಅರ್ಜುನ್ ನಿರ್ಮಾಣ ಮಾಡುತ್ತಿದ್ದಾರೆ. ಈಗಾಗಲೇ ಚಿತ್ರೀಕರಣವೂ ಮುಗಿದಿದ್ದು ಬಿಡುಗಡೆಗೆ ಕ್ಷಣಗಣನೆ ಶುರುವಾಗಿದೆ. ವೆಬ್‌ಸೀರೀಸ್ ಎಂದ ಮೇಲೆ ಚಿತ್ರಮಂದಿರಗಳ ಹಂಗಿಲ್ಲವಲ್ಲ. ಇಡೀ ದೇಶವೇ ಮನೆಯೊಳಗೆ ಕೂತಿರುವುದು ಒಂದು ರೀತಿಯಲ್ಲಿ ಒಟಿಟಿ ಫ್ಲಾಟ್‌ಫಾರಂಗೆ ವರದಾನವೇ ಆಗಿ ಪರಿಣಮಿಸಿದೆ. ಇದೇ ಕಾರಣಕ್ಕೆ ಏಪ್ರಿಲ್ ಮೊದಲ ವಾರದಷ್ಟೊತ್ತಿಗೆ 'ಲಾಕ್ಡ್' ವೆಬ್ ಸರಣಿಯನ್ನು ಅಂತರ್ಜಾಲ ವೇದಿಕೆಯಲ್ಲಿ ಬಿಡುಗಡೆ ಮಾಡುವ ಸಿದ್ಧತೆಗಳು ನಡೆಯುತ್ತಿವೆ. ಈ ಸುದ್ದಿಯನ್ನು ನೀವು ಓದುವ ಹೊತ್ತಿಗೆ 'ಲಾಕ್ಡ್' ನೋಡಲು ಸಿಗುವ ಸಾಧ್ಯತೆಯೂ ಇಲ್ಲದಿಲ್ಲ.

ಈ ವೆಬ್‌ಸೀರೀಸ್‌ನಲ್ಲಿ ಸತ್ಯದೇವ್ ಎಂಬ ಹುಡುಗ ನಾಯಕನಾಗಿ ನಟಿಸಿದ್ದಾರೆ. ಅವರ ಜೊತೆ ಸಂಯುಕ್ತಾ ವೇದಿಕೆ ಹಂಚಿಕೊಂಡಿದ್ದಾರೆ. ಒಂದು ಮನೆಯಲ್ಲಿ ಅಚಾನಕ್ಕಾಗಿ ಏಳು ಜನರು ಲಾಕ್ ಆದಾಗ ಏನೆಲ್ಲ ಸಂಭವಿಸುತ್ತದೆ, ಅವರು ಹೇಗೆಲ್ಲ ವರ್ತಿಸುತ್ತಾರೆ ಎಂಬುದೇ ಈ ವೆಬ್‌ಸೀರೀಸ್‌ನ ವಸ್ತುವಂತೆ. ಅಸ್ತಿತ್ವದ ಹೋರಾಟದಲ್ಲಿ ಮನುಷ್ಯ ಎಷ್ಟು ಸ್ವಾರ್ಥಿಯಾಗುತ್ತಾನೆ ಎಂಬುದನ್ನೂ ಇಲ್ಲಿ ರೋಚಕವಾಗಿಯೇ ಹೇಳಲಾಗಿದೆಯಂತೆ. ಕಥನ ಎಳೆಯನ್ನು ನೋಡಿದರೆ ಕನ್ನಡದ 'ಲಾಸ್ಟ್ ಬಸ್' ಸಿನಿಮಾ ನೆನಪಾಗುತ್ತದೆ.

ಒಂದೇ ರಾತ್ರಿಯಲ್ಲಿ ನಡೆಯುವ ಈ ಕಥೆಗಾಗಿ ನಲ್ವತ್ತು ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಸರಣಿ ಸಮರ್ಥವಾಗಿ ಮೂಡಿಬಂದಿರುವ ಖುಷಿಯಲ್ಲಿ ಸಂಯುಕ್ತಾ ಇದ್ದಾರೆ. ಜನರಿಂದ ಎಂಥ ಪ್ರತಿಕ್ರಿಯೆ ಸಿಗುತ್ತದೆ ಎಂಬ ಕುತೂಹಲವೂ ಅವರಲ್ಲಿದೆ.